ಹಾಸನ- ಸಕಲೇಶಪುರ ನಗರಗಳ ಒಳಗಡೆ ವಾಹನಗಳ ಸಂಚಾರದಿಂದ ನಾಗರೀಕರಿಗೆ ತೊಂದರೆ

1690 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಲೋಕೋಪಯೋಗಿ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹಾಸನ ನಗರ ಮತ್ತು ಸಕಲೇಶಪುರ ನಗರಗಳು ಬೆಂಗಳೂರು-ಮಂಗಳೂರು ಹೆದ್ದಾರಿಯಲ್ಲಿದ್ದು, ಪ್ರತಿನಿತ್ಯ ಸಹಸ್ರಾರು ವಾಹನಗಳು ಈ ನಗರದ ಒಳಗಡೆ ಸಂಚರಿಸುತ್ತಿರುವುದರಿಂದ ನಾಗರೀಕರಿಗೆ ಆಗುತ್ತಿರುವ ತೊಂದರೆಯು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಆ) *ಬಂದಿದಲ್ಲಿ, ಸದರಿ ತೊಂದರೆಗಳ ನಿವಾರಣೆಗೆ ಸರ್ಕಾರವು ಕೈಗೆತ್ತಿಕೊಂಡಿರುವ ಕ್ರಮಗಳೇನು?*

ಇ) *[illegible] ದಟ್ಟಣೆಯನ್ನು ತಡೆಗಟ್ಟಲು ಬೈಪಾಸ್ ರಸ್ತೆ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದೇ?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಹಾಸನ ನಗರಕ್ಕೆ ಬೈಪಾಸ್ ರಸ್ತೆ ನಿರ್ಮಾಣಕ್ಕೆ ರೂ.10 ಕೋಟಿ ಅಂದಾಜು ಪಟ್ಟಿ ಕೇಂದ್ರ ಸರ್ಕಾರದಿಂದ ಮಂಜೂರಾಗಿದ್ದು, ಈಗಾಗಲೇ ಗುತ್ತಿಗೆದಾರರಿಂದ ಕೆಲಸವು ಪ್ರಾರಂಭವಾಗಿರುತ್ತದೆ. ಸಕಲೇಶಪುರ ನಗರಕ್ಕೆ ಬೈಪಾಸ್ ರಸ್ತೆ ನಿರ್ಮಾಣಕ್ಕೆ ಕೇಂದ್ರ ಭೂ ಸಾರಿಗೆ ಸಚಿವಾಲಯದಿಂದ ಅನುಮೋದಿತ 1997-98ನೇ ವಾರ್ಷಿಕ ಯೋಜನೆಯಲ್ಲಿ 5.00 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ.

ಇ) ಹೌದು.

ಹಾಸನ ಜಿಲ್ಲೆಗೆ ನಬಾರ್ಡ್ ಯೋಜನೆ

1691 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹಾಸನ ಜಿಲ್ಲೆಗೆ ನಬಾರ್ಡ್ ಯೋಜನೆಯಡಿ ಬಾರಿ ಬಂದಿರುವ ಹಣವೆಷ್ಟು?*

ಆ) *ಸದರಿ ಹಣವನ್ನು ಇಲಾಖಾವಾರು, ಹಾಗೂ ಕ್ಷೇತ್ರವಾರು ಎಷ್ಟೆಷ್ಟು ಕೊಡಲಾಗಿದೆ? (ವಿವರವನ್ನು ನೀಡುವುದು)*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :